## 14

# ದೇವರ ನ್ಯಾಯ

ಅನ್ಯ ಜನರಿಗೆ: *"ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ. ಯಾಕಂದರೆ ದೇವರ ವಿಷಯವಾಗಿ ತಿಳಿಯಬಹುದಾದದ್ದು ಅವರ ಮನಸ್ಸಿಗೆ ಸ್ಪಷ್ಟವಾಗಿ ತಿಳಿದದೆ; ಅದನ್ನು ಅವರಿಗೆ ದೇವರೇ ಸ್ಪಷ್ಟವಾಗಿ ತಿಳಿಸಿದನು. ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯ ಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆಗೊತ್ತಾಗಿ ಕಾಣಬರುತ್ತದೆ; ಹೀಗಿರುವದರಿಂದ ಅವರು ಉತ್ತರ ವಿಲ್ಲದವರಾಗಿದ್ದಾರೆ. ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿಮಾಡಿ ಫಲ ಕಾಣಲಿಲ್ಲ; ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು. ... ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯೂ ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ" (ರೋಮಾಪುರ 1:18-32).*

*"ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದಿದ್ದರೂ ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ, ಹೇಗಂದರೆ ಅವರ ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆ; ಅವರ ಯೋಚನೆಗಳು ವಾದಿಪ್ರತಿವಾದಿಗಳಂತೆ - ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತದೆ" (ರೋಮಾಪುರ 2:14, 15).*

ಯೆಹೂದ್ಯರಿಗೆ: *"ಆದದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ. ಹೇಗಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ ದೋಷಿಯೆಂದು ತೀರ್ಪುಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಈ ದೋಷಗಳನ್ನೇ ನಡಿಸುತ್ತೀಯಲ್ಲಾ. ಆದರೆ ಅಂಥವುಗಳನ್ನು ನಡಿಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವದೆಂದು ಬಲ್ಲೆವು. ಎಲೈ ಮನುಷ್ಯನೇ, ಅಂಥವುಗಳನ್ನು ನಡಿಸುವವರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸುತ್ತೀಯಾ?" (ರೋಮಾಪುರ 2:1-3).*

ಎಲ್ಲರಿಗೂ: *"ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ*

*ಬರುವವು - ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ. ಆದರೆ ಒಳ್ಳೇದನ್ನು ನಡಿಸುವ ಪ್ರತಿಯೊಬ್ಬನಿಗೆ ಪ್ರಭಾವವೂ ಮಾನವೂ ಮನಶ್ಶಾಂತಿಯೂ ಉಂಟಾಗುವವು - ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ" (ರೋಮಾಪುರ 2:9, 10).*

*"ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವವು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗ ಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿ ಸ್ವರೂಪವಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿ ವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ" (ರೋಮಾಪುರ 3:23-26).*

ನ್ಯಾಯ ತೀರ್ವಿಕೆಯ ದಿನದಂದು ದೇವರು ಕೊಡುವ ಬಹುಮಾನಗಳನ್ನು ಮತ್ತು ಶಿಕ್ಷೆಗಳನ್ನು ಯೋಚಿಸಿದ ನಂತರ, ನಾವು ಹೀಗೆ ಕೇಳಬಹುದು, "ಇದೆಲ್ಲದರಲ್ಲಿ ದೇವರನ್ಯಾಯವು ಎಲ್ಲಿದೇ? ಈ ಭೂಮಿಯ ಮೇಲೆ ಅವರು ತಮ್ಮ ಜೀವಿತವನ್ನು ಅಲ್ಪವಾಗಿ ಜೀವಿಸಿದ ರೀತಿಗೆ ಜನರನ್ನು ಎಂದೆಂದಿಗೂ ಬಹುಮಾನ ಇಲ್ಲವೇ ಶಿಕ್ಷೆಯನ್ನು ಕೊಡುವಲ್ಲಿ ಆತನು ನ್ಯಾಯವಂತನೋ? ದುಷ್ಟ ಜೀವನದ ಅಂತ್ಯದಲ್ಲಿ ಮಾನಸಾಂತರ ಪಟ್ಟವನಿಗೆ ಆತನು ಯಾಕೆ ಬಹುಮಾನ ಕೊಡಬೇಕು?" ಲೂಕ 15ರಲ್ಲಿಯ ತಪ್ಪಿಹೋದ ಮಗನ ಅಣ್ಣನು, ದೂಷ್ಟ ಜೀವನ ಜೀವಿಸಿದ ತನ್ನ ತಮ್ಮನು ತಂದೆಯ ದಯೆಗೆ ಯೋಗ್ಯನಲ್ಲವೆಂದು ಯೋಚಿಸಿದನು (ವಚನಗಳು 25-30). "ಕೆಲವು 'ಸಣ್ಣ' ಅಗತ್ಯತೆಗಳನ್ನು ಕೈಕೊಳ್ಳುವಲ್ಲಿ ಸೋತು ಹೋದ ಕಾರಣದಿಂದ ಒಬ್ಬ ವ್ಯಕ್ತಿಗೆ ಆತನ್ನನು ದಂಡಿಸಿದರೆ ದೇವರ ನ್ಯಾಯವು ಏನಾಗಿರುವುದು?"

ದೇವರ ಪ್ರೀತಿ, ದಯೆ ಮತ್ತು ಕೃಪೆಯೊಂದಿಗೆ ಕೋಪ ಮತ್ತು ತೀಕ್ಷ್ಣ ಶಿಕ್ಷೆಯು ಹೇಗೆ ಸಾಮರಸ್ಯದಲ್ಲಿರುವವೆಂದು ಕೆಲವರು ಆಶ್ಚರ್ಯಪಡುತ್ತಾರೆ. ಅದೆಷ್ಟೋ ವಿಚಿತ್ರವಾಗಿ ಕಂಡರೂ ದೇವರ ಪ್ರೀತಿಯು ಆತನಲ್ಲಿ ಕೋಪವನ್ನೆಬ್ಬಿಸುತ್ತದೆ. ಬಹುಶಃ ಇದು ವಿಷಯವನ್ನು ಬಹಳವಾಗಿ ಸರಳವಾದದ್ದನ್ನಾಗಿ ಮಾಡುತ್ತದೆ. ಆದರೆ ನಾವು ಪ್ರೀತಿಸುವವರಿಂದ ಮತ್ತು ನಾವು ತ್ಯಾಗಮಾಡಿದವರಿಂದ ತಿರಸ್ಕರಿಸಲ್ಪಟ್ಟಾಗ, ಕೋಪವಿಲ್ಲದವರಾಗಿರಲು ನಾವು ಶಕ್ತರಾಗಿರುವೆವೋ? ದೇವರು ಸ್ವಗೌರವವನ್ನು ಕಾಪಾಡಿಕೊಳ್ಳುವ ದೇವರೆಂದು ಕರೆಯಲ್ಪಟ್ಟಿದ್ದಾನೆ.[1] ಆತನ ಪ್ರೀತಿಯು ಆತನ ಅಸೂಯೆಗೆ ಮೂಲವಾಗಿದೆ; ಆತನ ಸ್ವಗೌರವವನ್ನು ಕಾಪಾಡಿಕೊಳ್ಳುವಿಕೆಯು ಆತನನ್ನು ಕೋಪಿಸಿಕೊಳ್ಳಲಿಕ್ಕೆ ಕದಲಿಸುತ್ತದೆ; ಮತ್ತು ಆತನ ರೋಷವು ದಂಡಿಸಲಿಕ್ಕೆ ಆತನನ್ನು ಚಲಿಸುವಂತೆ ಮಾಡುತ್ತದೆ. "ಯೆಹೋವನು ಸ್ವಗೌರವವನ್ನು ಕಾಪಾಡಿ ಕೊಳ್ಳುವ ದೇವರು, ಆತನು ಮುಯ್ಯಿತೀರಿಸುವವನು; ಹೌದು, ಯೆಹೋವನು ಮುಯ್ಯಿತೀರಿಸುತ್ತಾನೆ, ತನ್ನ ಶತ್ರುಗಳ ಮೇಲೆ ದೀರ್ಘರೋಷವಿಡುತ್ತಾನೆ" (ನಹೂಮ 1:2).

ದೇವರು ನಮ್ಮ ತಂದೆಯಾಗಿರುವದರಿಂದ, ಆತನು ಕಠಿಣವಾದ ನ್ಯಾಯಾಧೀಶ ನಾಗಿರುವದಿಲ್ಲ, ಇಲ್ಲವೇ ಯೇಸುವು ಕುರಿಮರಿಯಾಗಿರುವದರಿಂದ ಆತನು ಸಿಂಹ

ವಾಗಿರಲಾರನು ಎಂದು ನಾವು ತೀರ್ಮಾನಿಸಿಕೊಳ್ಳಬಾರದು. ಪರಿಶುದ್ಧಾತ್ಮನನ್ನು ನಾವು ಪಾರಿವಾಳದಂತೆ ಯೋಚಿಸಬಹುದು, ಆದರೆ ಆತನು ದಹಿಸುವ ಅಗ್ನಿಯಾಗಬಹುದು ಎಂಬುದರಲ್ಲಿ ಸಂಶಯಪಡಬಾರದು. ಕ್ರಿಸ್ತನ ಮುಖಾಂತರವಾಗಿ ನಿತ್ಯದಂಡನೆಯಿಂದ ನಾವು ತಪ್ಪಿಸಿಕೊಳ್ಳುವದಕ್ಕಾಗಿ ದೇವರು ಹೇಗೆ ಮಾರ್ಗ ಒದಗಿಸದನೆಂದು ಸುವಾರ್ತೆ, "ಶುಭವಾರ್ತೆ"ಯು ನಮಗೆ ಹೇಳುತ್ತದೆ.

## ಪರಲೋಕ ಮತ್ತು ನರಕವು ಅಪತ್ರವಾಗಿರುವವೋ?

ಘೋರವಾದ ಪಾಪಗಳಾಗಿರುವವರನ್ನು ರಕ್ಷಿಸುವಲ್ಲಿ ದೇವರು "ನ್ಯಾಯವಂತನು" ಆಗಿರುವನೋ? ದೇವರು ಕಟ್ಟು ನಿಟ್ಟಾದ ನ್ಯಾಯದ ಆಧಾರದ ಮೇಲೆ ವರ್ತಿಸಿದರೆ, ನಮ್ಮಲ್ಲಿ ಯಾರೂ ರಕ್ಷಿಸಲ್ಪಡುವದಿಲ್ಲ! "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾಪುರ 3:23; ನೋಡಿರಿ 3:9, 10; 1 ಯೋಹಾನ 1:8, 10) ಎಂಬುದನ್ನು ನಾವು ಬಲ್ಲೆವು. ನಮ್ಮ ಪಾಪಗಳ ನಿಮಿತ್ತವಾಗಿ, ನಮ್ಮಲ್ಲಿ ಎಲ್ಲರೂ ದಂಡಿಸಲ್ಪಡಲು ಅರ್ಹರಾಗಿದ್ದೇವೆ. ಪರಲೋಕದಲ್ಲಿ ನಿತ್ಯ ಜೀವಕ್ಕೆ ಯಾರೂ ಅರ್ಹರಾಗಿರುವದಿಲ್ಲ. ನಾವು ನಮ್ಮ ಸ್ವಂತ ರಕ್ಷಣೆಯನ್ನು ಒದಗಿಸಿಕೊಳ್ಳಲಾರೆವು (ಎಫೆಸ 2:8, 9); ಯೇಸು ಮಾತ್ರವೇ ನಮ್ಮನ್ನು ರಕ್ಷಿಸಬಲ್ಲನು (ಅಪೊಸ್ತಲರ ಕೃತ್ಯಗಳು 4:12). ಜ್ಞಾಪಿಸಿಕೊಳ್ಳಿರಿ, ದೇವರ ನ್ಯಾಯವು, ನಮ್ಮ ಪಾಪಗಳಿಗಾಗಿ ಮರಣವನ್ನು ಕ್ರಯದಂತೆ ಕೇಳುತ್ತದೆ (ರೋಮಾಪುರ 6:23). ಯೇಸುವಿನ ಮರಣವು (ಕೊಲೊಸ್ಸೆ 1:19-22) ದೇವರ ನ್ಯಾಯವನ್ನು ತೃಪ್ತಿಗೊಳಿಸಿದೆ (ರೋಮಾಪುರ 3:25) ಮತ್ತು ಇಡೀ ಲೋಕಕ್ಕಾಗಿ ಕ್ಷಮಾಪಣೆಯನ್ನು ಲಭ್ಯವಾಗುವಂತೆ - ಮಾಡಿದ್ದಾನೆ (1 ಯೋಹಾನ 2:2). ಯೇಸುವು ನಮ್ಮನ್ನು ನಮ್ಮ ಪಾಪಗಳಿಂದ ಬಿಡುಗಡೆ ಮಾಡುವದರಿಂದ (ಪ್ರಕಟನೆ 1:5) ನಿತ್ಯವಾದ ರಕ್ಷಣೆಯನ್ನು ಒದಗಿಸಿದ್ದಾನೆ (ಇಬ್ರಿಯ 5:8, 9).

ದೇವರ ನ್ಯಾಯವನ್ನು ಕುರಿತು ಕೆಲವು ಕಠಿಣವಾದ ಪ್ರಶ್ನೆಗಳಿಗೆ ಉತ್ತರ ಕೊಡಲು ಪ್ರಯತ್ನಿಸೋಣ:

(1) "ಒಬ್ಬ ವ್ಯಕ್ತಿಯು, ತನ್ನ ಜೀವನದಲ್ಲೆಲ್ಲಾ ದುಷ್ಟನಾಗಿದ್ದು ಕೊನೆಯ ನಿಮಿಷದಲ್ಲಿ ದೇವರ ಕಡೆಗೆ ತಿರುಗಿಕೊಂಡರೆ, ಅಂಥವನನ್ನು ರಕ್ಷಿಸಿದರೆ ದೇವರು ನ್ಯಾಯವುಳ್ಳವನಾಗಿರುವನೋ?" ದೇವರು ಇದನ್ನು ಮಾಡಿದರೆ, "ಕರ್ತನ ಕ್ರಮವು ಸಮವಲ್ಲ" (ಯೆಹೆಜ್ಕೇಲ 33:17) ಎಂದು ಮಾನವ ತರ್ಕವು ಹೇಳಬಹುದು.

> "... ದುಷ್ಟನು ತನ್ನ ದುಷ್ಟತನವನ್ನು ಬಿಟ್ಟಲ್ಲಿ ಅವನ ಪಾಪವು ಅವನನ್ನು ಬೀಳಿಸದು ... ನಾನು ದುಷ್ಟನಿಗೆ - ನೀನು ಸತ್ತೇ ಸಾಯುವಿ ಎಂದು ಹೇಳಲು ಅವನು ತನ್ನ ಪಾಪವನ್ನು ಬಿಟ್ಟು ನೀತಿ ನ್ಯಾಯಗಳನ್ನು ನಡಿಸುವ ಪಕ್ಷದಲ್ಲಿ ಅಂದರೆ ಆ ದುಷ್ಟನು ಒತ್ತೆಯನ್ನು ಬಿಗಿಯಿಡಿಯದೆ ದೋಚಿಕೊಂಡದ್ದನ್ನು ಹಿಂದಕ್ಕೆ ಕೊಟ್ಟು ಜೀವಾಧಾರವಾದ ವಿಧಿಗಳನ್ನು ಅನುಸರಿಸಿ ಸಕಲ ದುಷ್ಕರ್ಮಗಳಿಗೂ ದೂರನಾಗಿರುವ ಪಕ್ಷದಲ್ಲಿ ಸಾಯುವದಿಲ್ಲ, ಬಾಳಿಯೇ ಬಾಳುವನು.
>
> "... ದುಷ್ಟನು ತನ್ನ ದುಷ್ಟತನವನ್ನು ಬಿಟ್ಟು ನೀತಿನ್ಯಾಯಗಳನ್ನು ನಡಿಸಿದರೆ ಅವುಗಳಿಂದ ಉಳಿಯುವನು" (ಯೆಹೆಜ್ಕೇಲ 33:12-19).

ಪೌಲನು ಮತ್ತು ಲೂಕ 15ರಲ್ಲಿಯ ತಪ್ಪಿಹೋದ ಮಗನು ದೇವರ ಕ್ಷಮಾಪಣೆಗೆ ಒಳ್ಳೆಯ ಉದಾಹರಣೆಯಾಗಿದ್ದಾರೆ. ಕ್ಷಮಾಪಣೆಯು ಒಂದು ವರವಾಗಿದೆ. ಅದನ್ನು

ಸ್ವೀಕರಿಸಲು ನಾವು ಅರ್ಹರಾಗಿಲ್ಲ. ಅದು ಯೇಸುವಿನ ಮರಣದ ಮೇಲೆ ಅವಲಂಭಿಸಿರುವದರಿಂದ, ದೇವರಿಗಾಗಿ ನಾವು ಎಷ್ಟು ಒಳ್ಳೆಯದನ್ನು ಮಾಡುತ್ತೇವೆ ಎಂಬುದರ ಮೇಲೆ ಅವಲಂಭಿಸದೇ ಇರುವದರಿಂದ (ಎಫೆಸ 2:8, 9), ಸೇವೆಯ ಸಮಯವನ್ನು ಗಮನಿಸದೇ ತನ್ನ ಸ್ವಂತ ಶರತ್ತುಗಳ ಮೇಲೆ ಯಾರಿಗಾದರೂ ರಕ್ಷಣೆಯನ್ನು ಕೊಡುವಲ್ಲಿ ಆತನು ನ್ಯಾಯವುಳ್ಳವನಾಗಿದ್ದಾನೆ.

(2) "ಒಬ್ಬ ವ್ಯಕ್ತಿಯು ತನ್ನ ಜೀವನದಲ್ಲೆಲ್ಲಾ ನೀತಿವಂತನಾಗಿದ್ದು ಆದರೆ ಅಂತ್ಯದಲ್ಲಿ ಪಾಪಭರಿತನಾದರೆ, ಅವನನ್ನು ಶಿಕ್ಷಿಸಿದರೆ ದೇವರು ನ್ಯಾಯವುಳ್ಳವನಾಗಿರುವನೋ?" ದೇವರು ಯೆಹೆಜ್ಕೇಲನಿಗೆ ಹೇಳಿದರು,

> ಶಿಷ್ಟನು ದ್ರೋಹ ಮಾಡಿದ್ದಲ್ಲಿ ಅವನ ಪುಣ್ಯವು ಅವನನ್ನು ಉದ್ಧರಿಸದು ... . ಅವನು ಮಾಡಿದ ಯಾವ ಸುಕೃತ್ಯವೂ ಅವನ ಲೆಕ್ಕಕ್ಕೆ ಸೇರಿಸಲ್ಪಡದು; ಅವನು ಮಾಡುವ ಪಾಪದಿಂದಲೇ ಅವನು ಸಾಯುವನು (ಯೆಹೆಜ್ಕೇಲ 33:12, 13).

> ಶಿಷ್ಟನು ತನ್ನ ಶಿಷ್ಟತನವನ್ನು ಬಿಟ್ಟು ಅಧರ್ಮ ಮಾಡಿದರೆ ಆ ಅಧರ್ಮದಿಂದಲೇ ಸಾಯುವನು (ಯೆಹೆಜ್ಕೇಲ 33:18).

ಒಬ್ಬ ವ್ಯಕ್ತಿಯು ಪಾಪಕ್ಕೆ ತನ್ನನ್ನು ಕೊಟ್ಟರೆ, ಅವನು ದೇವರ ಕೃಪೆಗೆ ಬಾಗಿಲನ್ನು ಮುಚ್ಚುವನು. ಯೇಸುವಿನ ರಕ್ತವು ಮಾತ್ರವೇ ಪಾಪವನ್ನು ಕ್ಷಮಿಸಬಲ್ಲದು. ಕ್ಷಮಾಪಣೆಯು ದೇವರಿಗೆ ನಮ್ಮ ವೈಯಕ್ತಿಕ ಪ್ರತಿಕ್ರಿಯೆಯ ಮೇಲೆ ಅವಲಂಭಿಸಿರುತ್ತದೆ.

(3) "ಕ್ರಿಸ್ತನ ಮುಖಾಂತರ ರಕ್ಷಣೆಯ ಬಗ್ಗೆ ತಿಳಿಯುವ ಮಾರ್ಗವಿಲ್ಲದಿದ್ದರೂ ಒಬ್ಬ ವ್ಯಕ್ತಿಯನ್ನು ಎಂದೆಂದಿಗೂ ಶಿಕ್ಷಿಸುವಲ್ಲಿ ದೇವರು ನ್ಯಾಯವಂತನಾಗಿರುವನೋ?" ಬೈಬಲು ನಿರ್ದಿಷ್ಟವಾಗಿ ಈ ಪ್ರಶ್ನೆಗೆ ಉತ್ತರ ಕೊಡದಿದ್ದರೂ, ಪರಿಶುದ್ಧ ಬರಹಗಳಿಂದ ಅರ್ಥಮಾಡಿದ್ದರ ಮೇಲೆ ನಮ್ಮ ತೀರ್ಮಾಣವನ್ನು ಅಸ್ತಿವಾರವನ್ನಾಗಿ ಮಾಡಿಕೊಳ್ಳಬಹುದು. "ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ" ಎಂದು ಯೇಸು ಹೇಳಿದನು (ಯೋಹಾನ 8:24ಬಿ). ತನ್ನ ಬಗ್ಗೆ ಎಂದೂ ಕೇಳದಿರುವವರನ್ನು ಯೇಸುವು ತನ್ನ ರಭಸವಾದ ಒಪ್ಪಿಗೆಯಲ್ಲಿ ಕೂಡಿಸುತ್ತಿರುವನೋ? ಅದು ಎಲ್ಲಾ ಜನರನ್ನು ಒಳಗೊಂಡಿದ್ದಿರ ಬೇಕು, ಯಾಕಂದರೆ ಯೇಸುವು ಜಗತ್ತಿನ ಒಬ್ಬನೇ ರಕ್ಷಕನಾಗಿದ್ದಾನೆ (ಯೋಹಾನ 14:6). ದೇವರ ಲಿಖಿತ ಪ್ರಕಟಣೆಯ ಲಾಭವಲ್ಲದೇ ಯೇಸುವಿನಲ್ಲಿ ನಂಬಿಕೆಯಿಡಲು ಮನುಷ್ಯರಿಗೆ ಯಾವುದೇ ಅವಕಾಶವಿರುವದಿಲ್ಲ ಎಂಬಂತೆ ತೋರುತ್ತದೆ. ಯಾಕಂದರೆ ನಂಬಿಕೆಯು ದೇವರ ವಾಕ್ಯದ ಮುಖಾಂತರ ಬರುತ್ತದೆ (ರೋಮಾಪುರ 10:17; ಯೋಹಾನ 17:20, 21; ಅಪೊಸ್ತಲರ ಕೃತ್ಯಗಳು 17:11, 12).

ಹಳೇ ಯುಗದಲ್ಲಿ, ಹಳೇ ಒಡಂಬಡಿಕೆಯ ಅವಧಿಯಲ್ಲಿ ದೇವರು ಜನರನ್ನು ಅವರು ಅಧೀನತೆಯಲ್ಲಿದ್ದ ಧರ್ಮಶಾಸ್ತ್ರಕ್ಕನುಸಾರವಾಗಿ ನ್ಯಾಯತೀರಿಸಿದನು. "ಧರ್ಮಶಾಸ್ತ್ರವಿಲ್ಲದವರಾಗಿ ಪಾಪ ಮಾಡಿದವರು ಧರ್ಮಶಾಸ್ತ್ರವಿಲ್ಲದವರಾಗಿ ನಾಶಹೊಂದುವರು; ಆದರೆ ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪ ಮಾಡಿದವರು ಧರ್ಮಶಾಸ್ತ್ರಕ್ಕನುಸಾರವಾಗಿ ತೀರ್ಪನ್ನು ಹೊಂದುವರು"; "ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮ ಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮ ಪ್ರಮಾಣವಾಗಿದ್ದಾರೆ" (ರೋಮಾಪುರ 2:12, 14), ಒಬ್ಬನು ದೇವರಿಲ್ಲವೆಂಬಂತೆ ಭಕ್ತಿಹೀನ ಜೀವನ ಜೀವಿಸಿದರೆ, ಅವನಿಗೆ

ಯಾವ ಕ್ಷಮಾಪಣೆಯೂ ಇರುವದಿಲ್ಲ; ಯಾಕಂದರೆ ಆತನ ಅಸ್ತಿತ್ವದ ಸಾಕಷ್ಟು ಪುರಾವೆಯು ಇರುವುದು (ರೋಮಾಪುರ 1:18-20) ಮತ್ತು ಸ್ವಾಭಾವಿಕವಾದ ನೈತಿಕ ನಿಯಮ ಇರುವುದು (ರೋಮಾಪುರ 2:14). ಈ ಅಂತ್ಯ ಯುಗದಲ್ಲಿ, ಕ್ರೈಸ್ತ ಅವಧಿಯಲ್ಲಿ ಪೌಲನು ಹೀಗೆ ಹೇಳಿದ್ದಾನೆ: "ಈ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ. ಯಾಕಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆದಾರ ಕೊಟ್ಟಿದ್ದಾನೆ" (ಅಪೊಸ್ತಲರ ಕೃತ್ಯಗಳು 17:30, 31).

ಯೇಸುವಿನ ಪುನರುತ್ಥಾನದ ನಂತರ ಆತನು ತನ್ನ ಅಪೊಸ್ತಲರಿಗೆ ಮಹಾ ಆಜ್ಞೆಯನ್ನು ಕೊಟ್ಟನು. ಅದು ಉಳಿದ ಸಮಯಕ್ಕೆ ಇಡೀ ಲೋಕವನ್ನು ಒಳಗೊಂಡಿರುತ್ತದೆ: "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ, ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:15, 16). ಪೌಲನ ಪ್ರಕಾರವಾಗಿ, ದೇವರು ರಕ್ಷಣೆಗಾಗಿ ತನ್ನ ಬಲವನ್ನು ಸುವಾರ್ತೆಯಲ್ಲಿ ಇಟ್ಟಿರುವನು:

> ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದ್ದಾಗಿದೆ. ಹೀಗಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಗೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ "ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ" (ರೋಮಾಪುರ 1:16, 17).

ಈ ಕಾರಣದಿಂದ, ಪೌಲನು ಸುವಾರ್ತೆಗೆ ವಿಧೇಯರಾಗದವರು ನಶಿಸುವರು ಹೋಗು ವರು ಎಂದು ಎಚ್ಚರಿಕೆ ಕೊಟ್ಟಿದ್ದಾನೆ. ಯೇಸುವು ಹಿಂದಿರುಗಿ ಬರುವಾಗ ಆತನ ಬಲಶಾಲಿ ದೇವದೂತರು, ದೇವರನ್ನು ಅರಿಯದವರಿಗೂ ಮತ್ತು ತಮ್ಮ ಕರ್ತನಾದ ಯೇಸುವಿನ ಸುವಾರ್ತೆಗೆ ವಿಧೇಯರಾಗದವರಿಗೂ "ಪ್ರತೀಕಾರವನ್ನು ಸಲ್ಲಿಸುವರು" (2 ಥೆಸಲೊನೀಕ 1:8).

"ದೇವರು ಪಕ್ಷಪಾತಿಯಲ್ಲ, ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು, ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಕೆಯಾಗಿದ್ದಾರೆಂದು ಈಗ ಸಂದೇಹವಿಲ್ಲದೆ ನನಗೆ ತಿಳಿದದೆ" ಎಂದು ಪೇತ್ರನು ಹೇಳಿದನು (ಅಪೊಸ್ತಲರ ಕೃತ್ಯಗಳು 10:34, 35), ಕೊರ್ನೇಲ್ಯನು ದೇವರಿಗೆ ಭಯಪಡುವವನಾಗಿದ್ದರೂ ಮತ್ತು ಒಳ್ಳೇ ನೈತಿಕ ಜೀವಿತ ಜೀವಿ ಸಿದರೂ (ಅಪೊಸ್ತಲರ ಕೃತ್ಯಗಳು 10:1, 2) ಅವನು ರಕ್ಷಿಸಲ್ಪಡ ಬೇಕಾಗಿತ್ತು (ಅಪೊಸ್ತಲರ ಕೃತ್ಯಗಳು 11:14). ಹೀಗೆ ದೇವರು ಅವನು ಸುವಾರ್ತೆಯನ್ನು ನಂಬಿ ಕ್ರೈಸ್ತನಾಗುವಂತೆ ಸುವಾರ್ತೆಸಾರಲು ಅವನ ಬಳಿಗೆ ಪೇತ್ರನನ್ನು ಕಳುಹಿಸಿಕೊಟ್ಟನು.

ಈ ಎಲ್ಲಾ ವಾಕ್ಯಗಳು ಬೆಳಕಿನಲ್ಲಿ, ಜಗತ್ತಿನಲ್ಲಿ ಪ್ರತಿಯೊಬ್ಬ ಜವಾಬ್ದಾರಿಕೆಯುಳ್ಳ ಮನುಷ್ಯನು ಸುವಾರ್ತೆಗೆ ವಿಧೇಯನಾಗಬೇಕು ಮತ್ತು ಜೀವಿಸಬೇಕು ಎಂಬುದು ಸ್ಪಷ್ಟ ವಾಗುತ್ತದೆ. ಯಾವುದೇ ಕಾರಣಕ್ಕಾಗಿ ಹಾಗೆ ಮಾಡದಿರುವವನು ನ್ಯಾಯವಂತನಾದ,

ಪರಿಶುದ್ಧ ದೇವರ ಹಸ್ತಗಳಲ್ಲಿ ಇದ್ದಾನೆ. ಪರಲೋಕದ ಈ ಕಡೆಯಲ್ಲಿರುವ ಪ್ರತಿಯೊಬ್ಬ ಕ್ರೈಸ್ತನ ಆತ್ಮಿಕ ಹಂಗು ನರಕದ ಈ ಕಡೆಯಲ್ಲಿರುವ ಪ್ರತಿಯೊಬ್ಬ ಪಾಪಿಗೆ ಸುವಾರ್ತೆಯನ್ನು ಸಾರುವುದಾಗಿದೆ. "ಸುವಾರ್ತೆಗೆ ವಿಧೇಯನಾದ ಆದರೆ ಅದನ್ನು ಎಂದೂ ಕೇಳದ ಮನುಷ್ಯನನ್ನು ದಂಡಿಸುವದರಲ್ಲಿ ದೇವರು ನ್ಯಾಯವುಳ್ಳವನಾಗಿರುವನೋ?" ಎಂಬುದು ಪ್ರಶ್ನೆ. ನಾವು ಉತ್ತರ ಕೊಡಲಾರದಷ್ಟು ದೊಡ್ಡದಾಗಿದೆ. ಯಾಕಂದರೆ ಎಲ್ಲಾ ಜನರ ಹೃದಯಗಳನ್ನು ಇಲ್ಲವೇ ಮನುಷ್ಯರ ಎಲ್ಲಾ ಪರಿಸ್ಥಿತಿಗಳನ್ನು ನಾವು ಸಂಪೂರ್ಣವಾಗಿ ತಿಳಿದುಕೊಳ್ಳಲಾರೆವು. ದೇವರು ನಮ್ಮನ್ನು ಮತ್ತು ಎಲ್ಲಾ ಮನುಷ್ಯರನ್ನು ನ್ಯಾಯತೀರ್ವಿಕೆ ಒಳಪಡಿಸುವದರ ಬಗ್ಗೆ ನಾವು ಕೃತಜ್ಞತೆಯುಳ್ಳವರಾಗಿರಬೇಕು. ನಾವು ನ್ಯಾಯಾಧೀಶರಾಗಿರುವದಿಲ್ಲ; ನಾವು ನ್ಯಾಯ ತೀರ್ವಿಕೆಗೆ ಒಳಪಡುವೆವು. ಆದುದರಿಂದ ನಾವು ನಮ್ಮ ಕರ್ತವ್ಯ ಮಾಡೋಣ ಮತ್ತು ರಕ್ಷಿಸಲು ದೇವರ ಬಲವಾಗಿರುವ ಸುವಾರ್ತೆಗೆ ವಿಧೇಯರಾಗಲು ಎಲ್ಲಾ ಜನರಿಗಾಗಿ ಬೇಡಿಕೊಳ್ಳೋಣ. ಎಲ್ಲಾ ಜನರೊಂದಿಗೆ ಎಲ್ಲಾ ಭೂಲೋಕದ ನ್ಯಾಯಧೀಶನು ನ್ಯಾಯವಾಗಿ ವರ್ತಿಸುವನೆಂದು ಭರವಸೆಯಿಂದ ನಂಬೋಣ (ಆದಿಕಾಂಡ 18:25).

## ನಿತ್ಯವಾದ ದಂಡನೆಯು ನ್ಯಾಯವಾದದ್ದಾಗಿರುವುದೋ?

ಯಾರ ಮಟ್ಟದಿಂದ ನಿತ್ಯವಾದ ದಂಡನೆಯ ನ್ಯಾಯ ಬದ್ಧತೆಯನ್ನು ನಾವು ಪರೀಕ್ಷಿಸೋಣ? ಪಾಪಿಗಳಂತೆ, ನಾವು ಪಾಪದ ಅಪರಿಮಿತತೆಯನ್ನು ಗ್ರಹಿಸಿಕೊಳ್ಳಲಾರೆವು. ಪಾಪವು ಏನಾಗಿರುವುದೋ ಎಂಬುದನ್ನು ನಾವು ನೋಡದಿರ ಬಹುದು. ಅದು ನಮ್ಮನ್ನು ಮತ್ತು ಇತರರನ್ನು ಮಾತ್ರವೇ ಒಳಗೊಂಡಿರುವದಿಲ್ಲ. ಆದರೆ ದೇವರೊಂದಿಗಿನ ವೈಯಕ್ತಿಕ ಸಂಬಂಧಗಳನ್ನೂ ಒಳಗೊಂಡಿರುತ್ತದೆ. ಪಾಪದೊಂದಿಗಿನ ನಮ್ಮ ಪರಿಚಿತತೆಯು ಅವರ ಭಯಂಕರತೆಯ ನಮ್ಮ ಗ್ರಹಿಕೆಯನ್ನು ಸಾಯಿಸಿಬಿಡುತ್ತದೆ. ಪಾಪವು ತೀಕ್ಷ್ಣವಾದ ದಂಡನೆಗೆ ಅರ್ಹವಾದದ್ದಾಗಿದೆ, ಯಾಕಂದರೆ ಅದರ ಮುಖಾಂತರ ನಾವು ಹೊಲೆಯಾಗಿ ಮಾಡಲ್ಪಟ್ಟಿದ್ದೇವೆ ಮತ್ತು ದೇವರ ಸ್ವಭಾವದ ಕೊರತೆಯುಳ್ಳವರಾಗಿದ್ದೇವೆ (ರೋಮಾಪುರ 3:23). ಇದು ನಮ್ಮ ಮಟ್ಟವಾಗಿದೆ (1 ಪೇತ್ರ 1:15, 16). ಕ್ಷಮಾಪಣೆಯಿಲ್ಲದೆ, ದೇವರ ಪಾಪರಹಿತ ಪರಲೋಕದಲ್ಲಿ ನಾವು ಸ್ಥಳವಿಲ್ಲದವರಾಗಿದ್ದೇವೆ (2 ಪೇತ್ರ 3:13; ಪ್ರಕಟನೆ 21:27).

ನಾವು ಪಾಪವನ್ನು ಪ್ರೀತಿಸಬಹುದು ಮತ್ತು ಆನಂದಿಸಬಹುದು, ಆದರೆ ದೇವರು ಅದನ್ನು ದ್ವೇಷಿಸುತ್ತಾನೆ (ಇಬ್ರಿಯ 1:9). ದೇವರು ಪಾಪವನ್ನು ದ್ವೇಷಿಸುತ್ತಾನೆ ಆದರೆ ಪಾಪಿಯನ್ನು ಪ್ರೀತಿಸುತ್ತಾನೆ ಎಂದು ಯಾರೋ ಹೇಳಿದ್ದಾರೆ. ಒಂದು ಅರ್ಥದಲ್ಲಿ ಇದು ಸತ್ಯವಾಗಿದೆ; ಆದರೆ ದೇವರು ಪಾಪಿಯನ್ನು ಪಾಪದಿಂದ ಬೇರ್ಪಡಿಸುವದಿಲ್ಲ. ಆತನು ಹಾಗೆ ಮಾಡಿದರೆ, ಆಗ ಆತನ ಕೋಪವೂ ದಂಡನೆಯೂ ಪಾಪದ ಮೇಲೆ ಇರುವುದು ಆದರೆ ಪಾಪಿಯ ಮೇಲೆ ಅಲ್ಲ. ದೇವರು ರೋಷವು ಪಾಪಿಯ ಮೇಲೆ ಸುರಿಸಲ್ಪಡುತ್ತದೆ.[2] ದೇವರು ಪಾಪವನ್ನು ನಾವು ದೃಷ್ಟಿಸುವಂತೆ ದೃಷ್ಟಿಸುವದಿಲ್ಲ.

ಇದು ಕೆಲವು ಪ್ರಶ್ನೆಗಳನ್ನು ಕೇಳುತ್ತದೆ: ಪಾಪಕ್ಕಾಗಿ ಯಾವುದು ನ್ಯಾಯವಾದ ಶಿಕ್ಷೆಯಾಗಿದೆ ಎಂದು ತೀರ್ಮಾನಿಸಲು ನಾವು ಶಕ್ತರೂ ಅರ್ಹತೆಯುಳ್ಳವರೂ ಆಗಿರುವೆವೋ? ಪಾಪವು ನಿಜವಾಗಿಯೂ ಏನಾಗಿರುವುದೆಂದು ನಾವು ನೋಡ ಬಹುದೋ? ಪಾಪವನ್ನು ದೇವರು ನೋಡುವಂತೆ ನಾವು ನೋಡಬಹುದೋ? ಪಾಪಕ್ಕಾಗಿ ನ್ಯಾಯವಾದ ಶಿಕ್ಷೆಯನ್ನು ಕುರಿತು ದೇವರ ದೃಷ್ಟಿಕೋನವನ್ನು ನಾವು

ಗ್ರಹಿಸಿಕೊಳ್ಳಬಹುದೋ? ದೇವರೊಂದಿನ ಒಬ್ಬನ ಸಂಬಂಧಕ್ಕೆ ಮತ್ತು ತನ್ನ ಚಿತ್ತಕ್ಕೆ ದಂಗೆಯ ಬಗ್ಗೆ ದೇವರ ದೃಷ್ಟಿಕೋನಕ್ಕೆ ಅದು ನಮ್ಮ ಜಗತ್ತಿನ ಮೇಲೆ ಯಾವದನ್ನು ಮಾಡುತ್ತದೆ ಎಂಬುದರ ಪರಿಣಾಮವನ್ನು ದಾಟಿ ನಾವು ಮುಂದೆ ನೋಡ ಬಹುದೋ? ಪಾಪದ ಅಪಾರತೆಯನ್ನು ನಾವು ನೋಡಲಾಗದಿದ್ದರೆ ಯೋಗ್ಯಶಿಕ್ಷೆ ಯಾವುದೆಂದು ನಾವು ತೀರ್ಮಾನಿಸಬಹುದೋ?

ಪಾಪದ ಘೋರತೆಯನ್ನು ಮತ್ತು ದೇವರ ಶಿಕ್ಷೆಯ ಕಠೋರತೆಯನ್ನು ದೇವರು ನ್ಯಾಯತೀರ್ಪನ್ನು ಸಾರಿದ ಉದಾಹರಣೆಗಳಲ್ಲಿ ನೋಡಬಹುದು. ಆದಾಮ, ಹವ್ವರ ಪಾಪದ ನಿಮಿತ್ತವಾಗಿ ನಮಗೆ ಮರಣ, ತೊಂದರೆ, ವ್ಯಾಧಿಗಳು, ನೋವು ಮತ್ತು ಸಾವಿರಾರು ಕಷ್ಟಗಳು ಬಂದವು. ಒಂದು ಚಿಕ್ಕ ಯಥಾರ್ಥವಾದದ್ದೆಂದು ತೋರುವ ಕಾರ್ಯದ ಪರಿಣಾಮಗಳಾಗಿ ಶತಮಾನಗಳಲ್ಲಿ ಕೋಟಿಕೋಟಿ ಜನರಿಗೆ ದಾಟಿಸುವದರಿಂದ ದೇವರು ಆ ಕಾರ್ಯದ ಗಂಭೀರತೆಯನ್ನು ತೋರಿಸಿದ್ದಾನೆ. ಇದು ಅನ್ಯಾಯವಾದದ್ದೆಂದು ನಾವು ನಂಬಬಹುದು, ಆದರೆ ದೇವರ ಚಿತ್ತಕ್ಕೆ ದಂಗೆಯೆದ್ದುದರ ಗಂಭೀರತೆಯನ್ನು ನಾವು ತೀರ್ಮಾನಿಸಲಾರೆವು. ಆತನು ಬದಲಾಗುವದಿಲ್ಲ (ಮಲಾಕಿ 3:6), ಆದರೆ "ನಿನ್ನೆ ಇದ್ದ ಹಾಗೆ ಈ ಹೊತ್ತು ಎಂದೆಂದಿಗೂ ಇರುವನು" (ಇಬ್ರಿಯ 13:8), ನಿತ್ಯ ದಂಡನೆಯು ಆತನ ಹಿಂದಿನ ನ್ಯಾಯತೀರ್ಪುಗಳೊಂದಿಗೆ ಹೊಂದಾಣಿಕೆಯಲ್ಲಿ ಇರುವದಿಲ್ಲ ಎಂದು ಹೇಳಲಿಕ್ಕಾಗದು.

ಭೂಮಿಯ ಮೇಲೆ ಅಷ್ಟು ಅಲ್ಪ ಸಮಯಕ್ಕಾಗಿ ದೇವರ ಚಿತ್ತವನ್ನು ಮೀರಿದ್ದಕ್ಕೆ ನಿತ್ಯ ದಂಡನೆಯು ಅರ್ಹವಾದದ್ದಲ್ಲ ಎಂದು ಕೆಲವರು ಯೋಚಿಸುತ್ತಾರೆ. ನಮ್ಮ ನ್ಯಾಯಾಲಯಗಳಲ್ಲಿಯೂ ಸಹ ಒಂದು ಅಪರಾಧ ಮಾಡಲು ತೆಗೆದು ಕೊಳ್ಳುವಷ್ಟು ಸಮಯವು ಶಿಕ್ಷೆಯ ಕಾಲವನ್ನೂ ಇಲ್ಲವೇ ಕಠಿಣತೆಯನ್ನು ತೀರ್ಮಾನಿಸುವದಿಲ್ಲ. ಶಿಕ್ಷೆಯನ್ನು ತೀರ್ಮಾನಿಸುವುದು ಅಪರಾಧ ಗಾಂಭಿರ್ಯತೆಯಾಗಿದೆ.

ನಿತ್ಯ ಶಿಕ್ಷೆಯನ್ನು ಕುರಿತು ಕೆಲವು ಅವಲೋಕನಗಳನ್ನು ಮಾಡತಕ್ಕದ್ದು:

(1) ಅತಿಕ್ರಮಿಸಿದ್ದಕ್ಕಾಗಿ ಒಬ್ಬನು ಕೊಡಬೇಕಾದದ್ದು, ನ್ಯಾಯವನ್ನು ತೃಪ್ತಿಪಡಿಸಲು ಹುಡುಕುವವನಿಗೆ ಅಪರಾಧವು ಎಷ್ಟು ಗಂಭೀರವಾದದ್ದಾಗಿರುವದೆಂಬುದನ್ನು ಸೂಚಿಸುತ್ತದೆ. ಪಾಪಕ್ಕಾಗಿ ಕೊಡಲು ದೇವರಿಗೆ ತನ್ನ ಕುಮಾರನ ಕ್ರೂರ ಶಿಲುಬೆಗೆ ಹಾಕಬೇಕಾದದ್ದು (1 ಪೇತ್ರ 2:24; 3:18). ದೇವರ ದೃಷ್ಟಿಯಲ್ಲಿ ಪಾಪವು ಎಷ್ಟು ಗಂಭೀರವಾದದ್ದಾಗಿತ್ತೆಂಬುದನ್ನು ಸೂಚಿಸುತ್ತದೆ. ದೇವರು ತನ್ನ ನ್ಯಾಯವನ್ನು ತೃಪ್ತಿಪಡಿಸಲು ಈ ರೀತಿಯಲ್ಲಿ ತನ್ನ ಕುಮಾರನನ್ನು ಕಳುಗಿಸಿದ್ದರೆ, ನಿಶ್ಚಯವಾಗಿಯೂ ನಿತ್ಯವಾದ ಶಿಕ್ಷೆಯು ನ್ಯಾಯದ ದೇವರ ನ್ಯಾಯಾಲಯದಲ್ಲಿ ಕಾರಣವಿಲ್ಲದ್ದಾಗಿ ಇರುವದಿಲ್ಲ.

(2) ತಪ್ಪಿಸಿಕೊಳ್ಳುವ ಮಾರ್ಗದಂತೆ ಅಂಥ ದೊಡ್ಡ ರಕ್ಷಣೆಯನ್ನು ದೇವರು ಒದಗಿಸಿರದಿದ್ದರೆ, ನಿತ್ಯವಾದ ಶಿಕ್ಷೆಯು ಅನ್ಯಾಯವಾದದ್ದಾಗಿ ತೋರುತ್ತಿತ್ತು (ಇಬ್ರಿಯ 2:3). ನಮ್ಮ ರಕ್ಷಣೆಗಾಗಿ ಅಂಥ ಪ್ರೀತಿಯ ತ್ಯಾಗವನ್ನು ತಿರಸ್ಕರಿಸುವುದು ಸರಿಯಾಗಿ ದೇವರ ಕೋಪವನ್ನು ಹುಟ್ಟಿಸುತ್ತದೆ (ಯೋಹಾನ 3:36).

(3) ದೇವರು ನಮಗೆ ಒಂದು ಆಯ್ಕೆಯನ್ನು ಕೊಟ್ಟಿರುವಾಗ, ನಾವು ಸಂಪಾದಿಸಿದ ಮತ್ತು ನಮಗೆ ಅರ್ಹತೆಯಿಲ್ಲದ ತಪ್ಪಿಸಿಕೊಳ್ಳುವ ಮಾರ್ಗವನ್ನು ಕೊಟ್ಟಿರುವಾಗ, ಶಿಕ್ಷೆಯಿಂದ ತಪ್ಪಿಸಿಕೊಳ್ಳುವೆವೋ, ಇಲ್ಲವೋ ಎಂಬುದು ನಮ್ಮ ಆಯ್ಕೆಯಾಗಿದೆ. ಯಾರಿಗಾದರೂ ಮನಸ್ಸಿದ್ದರೆ ಜೀವ ಜಲವನ್ನು ಉಚಿತವಾಗಿ ಕುಡಿಯಲಿ (ಪ್ರಕಟನೆ 22:17). ನಿತ್ಯ ಜೀವವನ್ನು ಇಲ್ಲವೇ ನಿತ್ಯದಂಡನೆಯನ್ನು ಆಯ್ಕೆ ಮಾಡಿ ಕೊಳ್ಳುವದನ್ನು

ದೇವರು ನಮಗೆ ಕೊಟ್ಟಿದ್ದಾನೆ (ಮತ್ತಾಯ 7:13, 14; 25:46). ನಮ್ಮ ಅಂತ್ಯ ಸ್ಥಿತಿಗಳು ದೇವರ ಆಯ್ಕೆಯ ಮೇಲೆ ಅಲ್ಲ, ಆದರೆ ನಮ್ಮ ಆಯ್ಕೆಗಳ ಮೇಲೆ ಅವಲಂಭಿಸಿರುತ್ತವೆ. ನಮ್ಮಲ್ಲಿ ಯಾರೂ ನಾಶವಾಗಬೇಕೆಂದು ಆತನು ಬಯಸುವದಿಲ್ಲ, ಆದರೆ ನಾವೆಲ್ಲರೂ ನಿತ್ಯ ಜೀವವನ್ನು ಹೊಂದಬೇಕೆಂದು ಅಪೇಕ್ಷಿಸುತ್ತಾನೆ (2 ಪೇತ್ರ 3:9). ದೇವರು ನಮಗಾಗಿ ನಿತ್ಯ ಶಿಕ್ಷೆಯನ್ನು ಆಯ್ದುಕೊಂಡರೆ, ಅದರ ಬಗ್ಗೆ ಮಾಡಲು ನಮಗೇನೂ ಇರುವುದಿಲ್ಲ, ಆಗ ಆತನು ಅನ್ಯಾಯಗಾರನಾಗಿರುವನು. ಹಾಗಿದ್ದರೂ, ನಮಗೆ ಆಯ್ಕೆ ಮಾಡುವ ಹಕ್ಕು ಇರುವುದು ಮತ್ತು ಇದರಲ್ಲಿ ದೇವರ ನ್ಯಾಯವು ಕಂಡು ಬರುತ್ತದೆ.

(4) ದೇವರು ಶಿಕ್ಷಿಸುವ ಜನರ ಹೃದಯಗಳ ಪರಿಸ್ಥಿತಿಯ ಕಾರಣದಿಂದ ನಿತ್ಯ ದಂಡನೆಯು ಕೊಡಲ್ಪಡುತ್ತದೆ. ಸೈತಾನನಿಗೆ ಮತ್ತು ಅವನ ದೂತರಿಗೆ ಬದಲಾಗದ ದಂಗೆಖೋರ ಹೃದಯಗಳಿರುವವು. ಅವು ಅವರ ನಿತ್ಯದಂಡನೆಯನ್ನು ನ್ಯಾಯ ಬದ್ಧ ವಾಗಿ ಮಾಡುವವು, ನಿತ್ಯ ಶಿಕ್ಷೆಗೆ ಅವರೊಂದಿಗೆ ಹೋಗುವವರು (ಮತ್ತಾಯ 25:41) ಸಹ ಹೃದಯಗಳನ್ನು ಕಠಿಣ ಪಡಿಸಿಕೊಂಡಿರುವರು. "ನಿನ್ನ ಮೊಂಡತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪ ವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪೂ ಪ್ರಕಟ ವಾಗುವ ದಿವಸ ಬರುತ್ತದಷ್ಟೆ" (ರೋಮಾಪುರ 2:5); "ಉಪದ್ರವಗಳಿಂದ ಸಾಯದೆ ಉಳಿದ ಜನರು ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು ದೇವರ ಕಡೆಗೆ ತಿರುಗಲಿಲ್ಲ" (ಪ್ರಕಟನೆ 9:20). ದೇವರ ಪ್ರತೀಕಾರದ ಹಿಂದಿನ ವ್ಯಕ್ತಪಡಿಸುವಿಕೆಗಳು ಎಲ್ಲಾ ಜನರು ತಮ್ಮ ದುಷ್ಟಮಾರ್ಗಗಳಿಂದ ಮಾನಸಾಂತರಕ್ಕೆ ಎಚ್ಚರಿಸಬೇಕಾಗಿದ್ದವು, ಆದರೆ ಎಲ್ಲಾ ಜನರು ದೇವರಿಗೆ ಒಪ್ಪಿಸಿಕೊಳ್ಳಲು ಸಿದ್ಧರಿರಲಿಲ್ಲ. ಬಿದ್ದುಹೋಗುವ ಕೆಲವರ ಬಗ್ಗೆ ಬೈಬಲ್ ಹೇಳುತ್ತವೆ: "ಅವರಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ" (ಇಬ್ರಿಯ 6:6). ನರಕಕ್ಕೆ ಹೋಗುವವರು ತಮ್ಮ ದಂಡನೆಯ ನಿಮಿತ್ತವಾಗಿ ಮತ್ತು ತಮ್ಮ ಹಟಮಾರಿ ಹೃದಯಗಳನ್ನು ಉಳಿಸಿ ಕೊಂಡದ್ದಕ್ಕಾಗಿ ದೇವರನ್ನು ನಿಂದಿಸುವರೋ?

ಎಲ್ಲರೂ "ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" ಎಂದು ನಾವು ಓದುತ್ತೇವೆ (ಫಿಲಿಪ್ಪಿ 2:11). ಪ್ರತಿಯೊಬ್ಬರೂ ಮಾನಸಾಂತರ ಹೊಂದುವರೆಂದು ಇದರ ಅರ್ಥವಾಗುವುದೋ? "ದೆವ್ವಗಳೂ ಕೂಡ ಹಾಗೆಯೇ ನಂಬಿ ಹೆದರಿ ನಡುಗುತ್ತವೆ" (ಯಾಕೋಬ 2:19). "ನೀನು ದೇವರ ಕುಮಾರನು" ಎಂದು ಹೇಳುವದರಿಂದ ಅವು ಯೇಸುವನ್ನು ಅರಿಕೆ ಮಾಡಿದವು (ಮಾರ್ಕ 3:11; ನೋಡಿರಿ 5:7). ಅರಿಕೆಯು ಅವಶ್ಯಕವಾಗಿ ಮಾನಸಾಂತರವನ್ನು ಒಳಗೊಂಡಿರುವದಿಲ್ಲ. ಅದು ಹಾಗೆ ಆಗಿದ್ದರೆ, ಈ ದೆವ್ವಗಳು ಅರಿಕೆ ಮಾಡಿದಾಗ ಮಾನಾಸಾಂತರಪಡುತ್ತಿದ್ದವು. ಅವು ನಿಜವಾಗಿ ಮಾನಸಾಂತರ ಪಡಲೇ ಇಲ್ಲ.

## ಶುಭವಾರ್ತೆ ಇರುವುದೋ?

ಈ ಪಾಠದಲ್ಲಿ ಶುಭವಾರ್ತೆಯು ನಾವು ಸ್ವೀಕಾರ ಮಾಡಿದರೆ ದೇವರು ಯೇಸುಕ್ರಿಸ್ತನ ಮುಖಾಂತರ ನರಕದ ವೇದನೆಗಳಿಂದ ತಪ್ಪಿಸಿಕೊಳ್ಳುವದನ್ನು ಸಾಧ್ಯಮಾಡಿದ್ದಾನೆ ಎಂಬುದು (ಇಬ್ರಿಯ 5:9). ರಕ್ಷಣೆಯನ್ನು ಅಪೇಕ್ಷಿಸುವ ಪ್ರತಿಯೊಬ್ಬನು ಅದನ್ನು ಹೊಂದಿಕೊಳ್ಳುವನು (ಪ್ರಕಟನೆ 22:17).

ತನ್ನ ಪ್ರೀತಿ, ದಯೆ ಮತ್ತು ಕೃಪೆಯ ಕಾರಣದಿಂದ ದೇವರು ನಮ್ಮ ಪಾಪಗಳ

ನಿಮಿತ್ತ ನಾವು ಕಷ್ಟಪಡಬಾರದೆಂದು ಅಪೇಕ್ಷಿಸಿದನು ಆದರೆ ನಮ್ಮ ಸಹಾಯ ಹೀನ ಪರಿಸ್ಥಿತಿಯಲ್ಲಿ ನಮಗೆ ಸಹಾಯವನ್ನು ಒದಗಿಸಿದನು (ರೋಮಾಪುರ 5:6-8). ನಮ್ಮ ಪಾಪಗಳಿಗಾಗಿ ಯೇಸುವಿನ ಮರಣದ ಮುಖಾಂತರ ಆತನು ಇದನ್ನು ಮಾಡಿದನು (ಯೋಹಾನ 3:16; ರೋಮಾಪುರ 3:24; 11:32). ಈ ಶುಭವಾರ್ತೆ, ಸುವಾರ್ತೆ, ನಮ್ಮ ರಕ್ಷಣೆಯಲ್ಲಿ ದೇವರ ಭಾಗವಾಗಿದೆ.

ನಾವು ಸುವಾರ್ತೆಯನ್ನು ನಂಬಿ, ವಿಧೇಯರಾದರೆ ಈ ಶುಭವಾರ್ತೆಯ ಲಾಭವನ್ನು ನಾವು ಸ್ವೀಕರಿಸುವೆವು (ರೋಮಾಪುರ 1:16; 2 ಥೆಸಲೊನೀಕ 1:8; 1 ಪೇತ್ರ 4:17). ಇದು ನಮ್ಮ ಪಾಪಗಳಿಗಾಗಿ ಮಾನಸಾಂತರ ಪಡುವದನ್ನು (2 ಪೇತ್ರ 3:9), ಯೇಸುವಿನಲ್ಲಿ ನಮ್ಮ ನಂಬಿಕೆಯನ್ನು ಅರಿಕೆ ಮಾಡುವದನ್ನು (ರೋಮಾಪುರ 10:9, 10) ಮತ್ತು ನಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದುವದನ್ನು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38; 1 ಪೇತ್ರ 3:20, 21) ಒಳಗೊಂಡಿರುತ್ತದೆ. ನಾವು ಇದನ್ನು ಮಾಡಿದರೆ, ಯೇಸುವಿನ ರಕ್ತದಿಂದ (ಕೊಲೊಸ್ಸೆ 1:19-22; ಪ್ರಕಟನೆ 1:5) ನಮ್ಮ ಪಾಪಗಳು ತೊಳೆಯಲ್ಪಡುವವು (ಅಪೊಸ್ತಲರ ಕೃತ್ಯಗಳು 22:16). ನಮ್ಮ ನೂತನ ಜನನದ ಹಾಗೂ ಅನಂತರದ ನೂತನ ಜೀವನದ ಕಾರಣದಿಂದ, "ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿ ಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ," ನಾವು "ಪರಿಶುದ್ಧರಾಗಿಯೂ ನಿರ್ದೋಷಿಗಳಾಗಿಯೂ ನಿರಪರಾಧಿಗಳಾಗಿಯೂ ಆತನ ಮುಂದೆ" ತರಲ್ಪಡುವೆವು (ಕೊಲೊಸ್ಸೆ 1:22, 23) ದೇವರು ಅವಕಾಶವನ್ನು ಒದಗಿಸಿಕೊಟ್ಟಿದ್ದಾನೆ. ನಿತ್ಯಶಿಕ್ಷೆಯನ್ನು ತಪ್ಪಿಸಿಕೊಳ್ಳಲು ನಾವು ನಿತ್ಯ ಜೀವವನ್ನು ಆಯ್ದುಕೊಳ್ಳತಕ್ಕದ್ದು.

## ಮುಕ್ತಾಯ

ನಿತ್ಯದಂಡನೆಯ ವಿಚಾರವು ನ್ಯಾಯದ ನಮ್ಮ ಭಾವನೆಗೆ ವಿರೋಧವಾದದ್ದಾಗಿ ಕಾಣಬಹುದು, ಆದರೆ ಇದನ್ನು ದೇವರು ವಾಗ್ದಾನ ಮಾಡಿದ್ದಾನೆ ಹಾಗೂ ಇದು ಆತನ ಸ್ವಭಾವಕ್ಕೆ ಅನುಗುಣವಾದದ್ದಾಗಿದೆ. ಪ್ರೀತಿಯ ದೇವರಂತೆ, ಆತನು - ತನ್ನ ಕೃಪೆಯ ಮುಖಾಂತರ - ಅನರ್ಹರಾದ ಮರ್ತ್ಯ ಮಾನವರಿಗೆ ಪರಲೋಕದಲ್ಲಿ ತನ್ನೊಂದಿಗೆ ನಿತ್ಯಜೀವದ ನಿರೀಕ್ಷೆಯನ್ನು ಒದಗಿಸಿಕೊಟ್ಟಿದ್ದಾನೆ. ಸುವಾರ್ತೆಗೆ ವಿಧೇಯರಾಗಿ ಆತನೊಂದಿಗೆ ಜೀವಿಸುವದನ್ನು ನಾವು ಆಯ್ದುಕೊಳ್ಳಬಹುದು ಇಲ್ಲವೇ ಸುವಾರ್ತೆಗೆ ಅವಿಧೇಯರಾಗಿ ನಿತ್ಯತ್ವದಲ್ಲೆಲ್ಲಾ ಸೈತಾನನೊಂದಿಗೂ ಅವನ ದೂತರೊಂದಿಗೂ ದಂಡಿಸಲ್ಪಡುವದನ್ನು ಆಯ್ದುಕೊಳ್ಳಬಹುದು. ದೇವರು ನಮ್ಮನ್ನು ಆಯ್ದುಕೊಂಡಿದ್ದಾನೆ. ಸೈತಾನನು ನಮ್ಮನ್ನು ಆಯ್ದುಕೊಂಡಿದ್ದಾನೆ. ನಾವು ದೇವರನ್ನಾಗಲೀ, ಸೈತಾನನನ್ನಾಗಲೀ ಆಯ್ದುಕೊಳ್ಳಬಹುದು. ನಾವು ಮಾಡುವ ಆಯ್ಕೆಯ ಮೇಲೆ ನಮ್ಮ ನಿತ್ಯವಾದ ಅಂತಿಮ ಸ್ಥಿತಿಗಳು ಅವಲಂಬಿಸಿರುವವು.

ಮರಣದ ಬಾಗಿಲು ನಮಗೆ ತೆರೆಯಲ್ಪಡುವಾಗ ಇಲ್ಲವೇ ಯೇಸುವು ಹಿಂದಿರುಗಿ ಬರುವಾಗ, ದೇವರೊಂದಿಗೆ ಮತ್ತು ನಿತ್ಯತ್ವದೊಂದಿಗೆ ಮುಖಾಮುಖಿಯಾಗಿ ನಾವು ಬರುವೆವು. ನಿನ್ನ ನಿತ್ಯವಾದ ಅಂತಿಮ ಸ್ಥಿತಿ ಯಾವುದಾಗಿರುವುದು?

ಟಿಪ್ಪಣಿಗಳು

[1]ನೋಡಿರಿ ವಿಮೋಚನಕಾಂಡ 20:5; ಯೆಹೋಶುವ 24:19; ಯೆಹೆಜ್ಕೇಲ 39:25; 1 ಕೊರಿಂಥ 10:22. [2]ನೋಡಿರಿ ಯೋಹಾನ 3:36; ರೋಮಾಪುರ 1:18; ಎಫೆಸ 5:6; ಕೊಲೊಸ್ಸೆ 3:6; 1 ಥೆಸಲೊನೀಕ 2:16.

© 2009 Truth for Today